ನಮ್ಮ ನಾಗರೀಕ ಸಹಬಾಂಧವರಿಗೊಂದು ಮುಕ್ತ ಪತ್ರ:
ನಾವು ಇನ್ನೂ ಹೆಚ್ಚು ಜನ ಪ್ರತಿದಿನ ಮಾತನಾಡುತ್ತೇವೆ.

ಅಕ್ಟೋಬರ್ 7, 2019

ನಮ್ಮ ಸಾಂಸ್ಕೃತಿಕ ಸಮುದಾಯದ 49 ಸಹೋದ್ಯೋಗಿಗಳ ವಿರುದ್ಧ FIR ಒಂದನ್ನು ದಾಖಲಿಸಲಾಗಿದೆ. ಏಕೆಂದರೆ, ಅವರು ನಾಗರೀಕ ಸಮುದಾಯದ ಗೌರವಾನ್ವಿತ ಸದಸ್ಯರಾಗಿ ತಮ್ಮ ಕರ್ತವ್ಯವನ್ನು ಮಾಡಿದ್ದಕ್ಕಾಗಿ. ನಮ್ಮ ದೇಶದಲ್ಲಿ ನಡೆಯುತ್ತಿರುವ ಗುಂಪು ಹಲ್ಲೆಗಳ ಬಗ್ಗೆ ತಮ್ಮ ಕಳವಳವನ್ನು ವ್ಯಕ್ತಪಡಿಸಿ ಅವರು ಪ್ರಧಾನಮಂತ್ರಿಯವರಿಗೆ ಒಂದು ಮುಕ್ತ ಪತ್ರವನ್ನು ಬರೆದರು.

ಇದನ್ನು ರಾಷ್ಟ್ರದ್ರೋಹದ ಕ್ರಿಯೆ ಎನ್ನಬಹುದೆ? ಅಥವಾ ನ್ಯಾಯಾಲಯಗಳನ್ನು ದುರ್ಬಳಕೆ ಮಾಡಿಕೊಂಡು ಕಿರುಕುಳ ಕೊಡುವುದು ನಾಗರೀಕರ ಧ್ವನಿಯನ್ನು ಮೌನಗೊಳಿಸುವ ತಂತ್ರವಾಗಿದೆಯೆ?

ನಾವಲ್ಲ, ಭಾರತದ ಸಾಂಸ್ಕೃತಿಕ ಸಮುದಾಯದ ಸದಸ್ಯರಾಗಿ, ನೈತಿಕಪ್ರಜ್ಞೆಯುಳ್ಳ ನಾಗರೀಕ ಪ್ರಜೆಗಳಾಗಿ ಇಂಥ ಕಿರುಕುಳವನ್ನು ಖಂಡಿಸುತ್ತೇವೆ. ಅಷ್ಟು ಮಾತ್ರವಲ್ಲ ನಮ್ಮ ಸಹೋದ್ಯೋಗಿಗಳು ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದ ಪ್ರತಿಯೊಂದು ಪದವನ್ನೂ ಬೆಂಬಲಿಸುತ್ತೇವೆ. ಆದ್ದರಿಂದಲೇ ಆ ಪತ್ರವನ್ನು ಮತ್ತೊಮ್ಮೆ ಇಲ್ಲಿ ಹಂಚಿಕೊಳ್ಳುತ್ತಿದ್ದೇವೆ. ಹಾಗೂ ನಮ್ಮ ಎಲ್ಲಾ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಕಾನೂನು ಸಮುದಾಯಗಳ ಸದಸ್ಯರು ಹೀಗೇ ಮಾಡಿರಿ ಎಂದು ಕೋರಿಕೊಳ್ಳುತ್ತಿದ್ದೇವೆ.

ಆದ್ದರಿಂದಲೇ ನಮ್ಮಲ್ಲಿ ಹೆಚ್ಚು ಜನ ಪ್ರತಿದಿನವೂ ಮಾತನಾಡಲಿದ್ದಾರೆ. ಜನರ ಧ್ವನಿಗಳನ್ನು ಮೌನಗೊಳಿಸುವುದರ ವಿರುದ್ಧ ನಾಗರೀಕ ಪ್ರಜೆಗಳಿಗೆ ಕಿರುಕುಳಕೊಡುವುದಕ್ಕಾಗಿ ನ್ಯಾಯಾಲಯಗಳನ್ನು ದುರ್ಬಳಕೆ ಮಾಡಿಕೊಳ್ಳುವುದರ ವಿರುದ್ಧ.